ಮಹಿಳಾ ಸಮಾಜದಲ್ಲಿ ನೃತ್ಯ ಶಿಕ್ಷಕಿಯಾಗಿ ನಾನು ವೃತ್ತಿ ಆರಂಭಿಸಿದೆ. ಬಿಇಎಲ್ ಸಂಸ್ಥೆಯ ಸಾಂಸ್ಕೃತಿಕ ಸಹಾಯಕಿ ಆಗಿ ಆಯ್ಕೆಯಾದೆ. ಹೀಗೆ ನೃತ್ಯ ಬದುಕು ಕೊಟ್ಟಿತು.

◆ **ಹಾಗಿದ್ದರೆ ದೇವಾಲಯ ನೃತ್ಯವನ್ನು ನೀವು ಬಾಲ್ಯದಲ್ಲಿ ಕಲಿತದ್ದಲ್ಲ. ಈ ಅವಕಾಶ ನಿಮಗೆ ಹೇಗೆ ಒದಗಿ ಬಂತು? ಏನಿದು ದೇವಾಲಯ ನೃತ್ಯ?**

ಬಿಇಎಲ್‌ನಲ್ಲಿ ವೃತ್ತಿ ನಿರ್ವಹಿಸುತ್ತಿದ್ದಾಗ ಆಂಧ್ರಪ್ರದೇಶ ಸರ್ಕಾರದ ಪ್ರಕಟಣೆಯೊಂದು ನನ್ನ ಗಮನಕ್ಕೆ ಬಂತು. ದೇವಾಲಯ ನೃತ್ಯ ಕಲಿಕೆಯ ಕೋರ್ಸನ್ನು ಆರಂಭಿಸುತ್ತಿದ್ದು, ಆಸಕ್ತರು ಅರ್ಜಿ ಸಲ್ಲಿಸಬಹುದು ಎಂಬ ಪ್ರಕಟಣೆಯದು. ಇದಕ್ಕೆಲ್ಲ ಮೂಲ ಕಾರಣ ಕಮಲಾದೇವಿ ಚಟ್ಟೋಪಾಧ್ಯಾಯರು. ಬೆಂಗಳೂರಿನಲ್ಲಿ ಒಂದು ಸಭೆ ನಡೆಯುತ್ತಿದ್ದಾಗ ದೇವಾಲಯಗಳಲ್ಲಿ ಹಿಂದೆ ದೇವದಾಸಿಯರು ನೃತ್ಯಸೇವೆ ಅರ್ಪಿಸುತ್ತಿದ್ದ ಕುರಿತು ಮಾತು ಬಂತು. ಬ್ರಿಟಿಷರ ಕಾಲದಲ್ಲಿ ದೇವಾಲಯದಲ್ಲಿ ನಡೆಯುತ್ತಿದ್ದ ಅನೇಕ ರೀತಿಯ ಕಲಾಸೇವೆಗಳು ನಿಂತುಹೋದುದರ ಬಗ್ಗೆಯೂ ಚರ್ಚೆ ನಡೆಯಿತು. ಆ ಬಗ್ಗೆ ಕುತೂಹಲ ತಾಳಿದ ಕಮಲಾದೇವಿ ಚಟ್ಟೋಪಾಧ್ಯಾಯರು, ಈ ಕಲಾಪ್ರಕಾರವನ್ನು ಉಳಿಸಿಕೊಳ್ಳಬೇಕು, ಅದರಲ್ಲಿರುವ ಜ್ಞಾನವು ಅಳಿದು ಹೋಗಬಾರದು ಎಂಬ ಉದ್ದೇಶದಿಂದ, ಕಾರ್ಯಾಗಾರವೊಂದನ್ನು ಆಯೋಜಿಸುವ ಕುರಿತು ಪ್ರಸ್ತಾಪಿಸಿದರು. ಆಗ ಪತ್ರಕರ್ತರಾಗಿದ್ದ, ಕಲಾಪ್ರಕಾರಗಳ ಬಗ್ಗೆ ಬಹಳಷ್ಟು ಆಸಕ್ತಿ ಹೊಂದಿದ್ದ ಬಿ.ವಿ.ಕೆ. ಶಾಸ್ತ್ರಿಯವರು ಮತ್ತು ಗುರುಗಳಾದ ನಟರಾಜ ರಾಮಕೃಷ್ಣ ಅವರು, ಕಾರ್ಯಾಗಾರ ಆಯೋಜಿಸುವ ನಿಟ್ಟಿನಲ್ಲಿ ಪ್ರಯತ್ನಗಳನ್ನು ಮಾಡಿದರು. ಆಂಧ್ರಪ್ರದೇಶದ ಸಂಗೀತ ನೃತ್ಯ ಅಕಾಡೆಮಿ ಪ್ರಾಯೋಜಕತ್ವದಲ್ಲಿ, ರಾಜಮಂಡ್ರಿ ಬಳಿಯ ದುವಾ ಎಂಬ ಗ್ರಾಮವೊಂದರಲ್ಲಿ ಈ ನೃತ್ಯವನ್ನು ಬಲ್ಲ ಹಿರಿಯ ದೇವದಾಸಿ ಮಹಿಳೆಯರು ಇನ್ನೂ ಇದ್ದಾರೆನ್ನುವುದು ತಿಳಿದುಬಂತು. ಸರಿ, ಅವರನ್ನು ಭೇಟಿಯಾಗಿ ಕಾರ್ಯಾಗಾರಕ್ಕೆ ಬರುವಂತೆ ಆಹ್ವಾನಿಸಿದರು. ಅವರಾದರೋ ಈ ನೃತ್ಯವನ್ನು ಯಾರಿಗೂ ಹೇಳಿಕೊಡಲು ತಯಾರಿರಲಿಲ್ಲ. ಹೊಸತಲೆಮಾರಿನವರು ಈ ಪ್ರಕಾರವನ್ನು ಹಾಳು ಮಾಡುತ್ತಾರೆ ಎಂದು ಅವರು ಸಿಟ್ಟು ಮಾಡಿಕೊಳ್ಳುತ್ತಿದ್ದರು. ಕೊನೆಗೂ ಅವರನ್ನು ಒಪ್ಪಿಸಿದ್ದಾಯಿತು. ತಿರುಪತಿ ದೇವಸ್ಥಾನವು ಸೌಕರ್ಯಗಳನ್ನು ಒದಗಿಸಿ, ಆಂಧ್ರಪ್ರದೇಶ ಸರ್ಕಾರವು ಅದಕ್ಕೆ ಪ್ರೋತ್ಸಾಹ ನೀಡಿದ್ದರಿಂದ ಒಂದು ಕಾರ್ಯಾಗಾರವನ್ನು ಆಯೋಜಿಸಲು ನಿರ್ಧರಿಸಲಾಯಿತು. ಅದೇ ವೇಳೆಗೆ ಬಿಇಎಲ್‌ನಲ್ಲಿ ವೃತ್ತಿ ನಿರ್ವಹಿಸುತ್ತಿದ್ದ ನಾನು ಅನೇಕ ಕಡೆ ಕಾರ್ಯಕ್ರಮಗಳನ್ನು ನೀಡಿದ್ದೆ. ನನ್ನ ನೃತ್ಯ ಕಲಿಕೆಯ ಆಸಕ್ತಿಯ ಕುರಿತು ಅರಿತಿದ್ದ ಮಾಯಾ ದೀದಿ ಅಂದರೆ ಕಥಕ್ ನೃತ್ಯಗುರು ಮಾಯಾ ರಾವ್ ಮತ್ತು ಅವರ ಪತಿ ನಟರಾಜ್ ಅವರು ನನಗೆ ಅರ್ಜಿ ಸಲ್ಲಿಸಲು ಒತ್ತಾಯಿಸಿದರು. ಹೊಸದನ್ನು ಕಲಿಯುವ ಉತ್ಸಾಹದಲ್ಲಿ ನಾನು ಆ ಕೋರ್ಸಿಗೆ ಅರ್ಜಿ ಸಲ್ಲಿಸಿದೆ. ಕಾರ್ಯಾಗಾರಕ್ಕೆ ಆಯ್ಕೆಯಾದರೂ, ಇತ್ತ ಬಿಇಎಲ್ ಕೆಲಸ ಬಿಟ್ಟು ಬರಲು ಸಾಧ್ಯವಿರಲಿಲ್ಲ. ಮನೆಯಲ್ಲಿ ಬಡತನವಿತ್ತು. ನನ್ನ ಸಂಪಾದನೆ ಅಗತ್ಯವಿತ್ತು. ಆಗಲೂ ಬಿ.ವಿ.ಕೆ. ಶಾಸ್ತ್ರಿಯವರೇ ಮುತುವರ್ಜಿ ವಹಿಸಿ, ಬಿ.ಇ.ಎಲ್.ನಲ್ಲಿ ಹಿರಿಯ ಅಧಿಕಾರಿಗಳಿಗೆ ಹೇಳಿ ನನಗೆ ರಜೆ ಕೊಡಿಸಿದ್ದರು. ಅಂತೂ ಇಂತೂ ಕಾರ್ಯಾಗಾರವನ್ನು ಸೇರಿದ್ದಾಯಿತು. ಕೋರ್ಸಿನಲ್ಲಿ ದೇವದಾಸಿಯರೇ ಸ್ವತಃ ಬಂದು ದೇವಾಲಯ ನೃತ್ಯವನ್ನು ಹೇಳಿಕೊಟ್ಟಿದ್ದರು. ನಾನು ನೃತ್ಯಗುರು ನಟರಾಜ ರಾಮಕೃಷ್ಣ ಅವರ ಮನೆಯಲ್ಲಿ ತಂಗಿದ್ದೆ. ಬಿ.ವಿ.ಕೆ. ಶಾಸ್ತ್ರಿಯವರು ನನ್ನನ್ನು ಬಹಳ ಪ್ರೋತ್ಸಾಹಿಸಿ ಕಲಿಯುವಂತೆ ಹುರಿದುಂಬಿಸಿದ್ದರು.

◆ **ಕಾರ್ಯಾಗಾರದ ಅನುಭವಗಳನ್ನು ಹಂಚಿಕೊಳ್ಳಬಹುದಾ ?**

ಅದು ನನ್ನ ಜೀವನದ ಗತಿಯನ್ನೇ ಬದಲಿಸಿದ ಕಾರ್ಯಾಗಾರ. ಅಲ್ಲಿ ಇಬ್ಬರು ಹಿರಿಯ ದೇವದಾಸಿ ಮಹಿಳೆಯರು ಭರತಕಲಾ ಪ್ರಪೂರ್ಣ ಬಿರುದಾಂಕಿತರಾದ ಬುಲಿ ವೆಂಕಟರತ್ನಮ್ಮ ಮತ್ತು ಸಾರಿಡೇ ಮಾಣಿಕ್ಯಂ ಅವರು ನೃತ್ಯವನ್ನು ಹೇಳಿಕೊಡಲು ಬಂದಿದ್ದರು. ಅವರ ಜೀವನಶೈಲಿಯೇ ಇತರರಿಗೆ ಮಾದರಿ ಎಂಬಂತಿತ್ತು. ಮುಂಜಾನೆ ಎದ್ದು ಅವರು ಸ್ನಾನಪೂಜಾದಿಗಳನ್ನು ಬಹಳ